


### ಮಮ್ಮಿ ಇಷ್ಟ ಉತ್ತಮ ಲೇಖನ

ಡಾ.ಸುವರ್ಣ ಬಿ.ಜೆ. ಅವರ 'ಹೆಣ್ಮಕ್ಕಳಿಗೆ ಮಮ್ಮೀನೆ ಇಷ್ಟ' ಲೇಖನ ಸೊಗಸಾಗಿ ಮೂಡಿ ಬಂದಿದೆ.

-ಸರ್ದಾರ್ ಎಂ. ಅರಸೀಕೆರೆ/ ಕೋಟೇಶ್ವರ ನಾರಾಯಣರಾವ್, ಬೆಂಗಳೂರು/ ಎಂ.ಆರ್.ಶೋಭಾಶೇಖರ, ದೊಡ್ಡಬಳ್ಳಾಪುರ/ ಮೊಳಕಾಲ್ಮುರು ಸುರೇಶ, ಬಳ್ಳಾರಿ

### ಹೆಣ್ಮಕ್ಕಳಿಗೆ ಅಪ್ಪ ಇನ್ನೂ ಇಷ್ಟ

ಹೆಣ್ಣುಮಕ್ಕಳಿಗೆ ತಾಯಿ ಏಕೆ ಇಷ್ಟ ಎಂಬುದನ್ನು ವೈಜ್ಞಾನಿಕವಾಗಿ ಡಾ.ಸುವರ್ಣ ನಿರೂಪಿಸಿದ್ದಾರೆ. ಆದರೆ ಅಪ್ಪನೊಂದಿಗೆ ಮತ್ತೊಂದು ರೀತಿಯ ಆಪ್ತ, ಭಾವುಕ ಸಂಬಂಧ ಎಲ್ಲ ಹೆಣ್ಣುಮಕ್ಕಳಿಗೂ ಇದ್ದೇ ಇರುತ್ತದೆ– ಇದು ಎಷ್ಟೆಂದರೆ ಅಪ್ಪನೇ ಹೆಚ್ಚು ಎನ್ನುವಷ್ಟು.

-ಎಸ್.ಮುಕ್ತಾದೇವಿ, ರಾಯಚೂರು

### ಫ್ರಾಡ್?

'ಹೆಣ್ಮಕ್ಕಳಿಗೆ 'ಮಮ್ಮೀನೇ ಇಷ್ಟ' ಲೇಖನದಲ್ಲಿ 'ಈಡಿಪಸ್ ಕಾಂಪ್ಲೆಕ್ಸ್' ವಿಷಯ ಬಂದಿದೆ. ಒಂದರ್ಥದಲ್ಲಿ ಅದು ಫ್ರಾಯ್ಡ್‌ನ 'ಈಡಿಯಟ್ ಕಾಂಪ್ಲೆಕ್ಸ್!' ಫ್ರಾಯ್ಡ್ ಈ ಕಾಲದ ಬಹು ದೊಡ್ಡ 'ಫ್ರಾಡ್' (ವಂಚನೆ) ಎಂದಿದ್ದಾರೆ, ದಾರ್ಶನಿಕ ರೊಬ್ಬರು! (ಎಂದಾಕ್ಷಣ ಅವನು ಹೇಳುವುದೆಲ್ಲವೂ ಸುಳ್ಳಲ್ಲ.)

- ಸಿಪಿಕೆ, ಮೈಸೂರು

### ಕಣ್ತೆರೆಸುವ ವೈದ್ಯಕೀಯ ಲೇಖನ

ಕಾಯಿಲೆಗಳನ್ನು ದಿಢೀರನೆ ಗುಣಪಡಿಸಿ ನಂತರ ರೋಗಿಗಳಿಗೆ ಮಾರಕವಾಗುವ ಅಪಾಯದ ಬಗ್ಗೆ ಕಣ್ತೆರೆಸುವಂತಹ ಅಂಶವನ್ನು ಡಾ. ರತ್ನಾಕರ್ 'ವಂಡರ್ ಔಷಧಿಗಳು' ಬರಹದಲ್ಲಿ ಬೆಳಕಿಗೆ ತಂದಿದ್ದಾರೆ.

-ಡಿ.ಎಸ್. ಶ್ರೀನಾಥ್, ಶಿವಮೊಗ್ಗ

### ಎಚ್ಚರಿಕೆಯ ಗಂಟೆ

ಸಸಿಕೆ ನೆನಪಿಗೊಂದು ಪೇಪರ್ ಹಕ್ಕಿ! ಡಾ.ಜಯಕರ ಭಂಡಾರಿಯವರ ಬರಹ ಎಚ್ಚರಿಕೆಯ ಗಂಟೆಯಾಗಿತ್ತು.

-ಎಚ್. ಆನಂದ್‌ಕುಮಾರ್, ಚಿತ್ರದುರ್ಗ

### ಅರ್ಥಪೂರ್ಣ ಬರಹ

ಡಾ.ಯಲಗುರೇಶ ಸಂಕನಾಳರ 'ವೈದ್ಯರೇಕೆ ಸಿಟ್ಟಿಗೇಳುತ್ತಾರೆ?' ಲೇಖನ ಅರ್ಥಪೂರ್ಣವಾಗಿದೆ.

-ಮೆ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಹಳೆಯ 'ಸುಧಾ' ಬೇಕೆ? ಸಂಪರ್ಕಿಸಿ

ನಾನು 'ಸುಧಾ' ವಾರಪತ್ರಿಕೆಯ ಹಳೆಯ ಓದುಗನಾಗಿದ್ದು, ಜೊತೆಗೆ ಸಂಗ್ರಹಕಾರನೂ ಆಗಿದ್ದೇನೆ. ಇತ್ತೀಚೆಗೆ ಕಾರಣಾಂತರದಿಂದ 'ಸುಧಾ' ಸಂಗ್ರಹದ ನಿರ್ವಹಣೆ ಮಾಡುವುದು ಕಷ್ಟವಾಗುತ್ತಿದೆ. ರದ್ದಿ ಹಾಕಲು ಮನಸ್ಸಿಲ್ಲ. ಆಸಕ್ತ ಸಂಗ್ರಹಕಾರರಿಗೆ (ಹಣದ ಆಸೆಯಿಲ್ಲದೇ) ಇತ್ತೀಚಿನ ಸುಮಾರು ಹದಿನೈದು ವರ್ಷಗಳ ಸಂಗ್ರಹವನ್ನು ನೀಡುವ ವಿಚಾರ ಮಾಡಿದ್ದೇನೆ. ಕಾರಣ ಆಸಕ್ತರು ಮೊಬೈಲ್: 9916206504 ಸಂಪರ್ಕಿಸಬಹುದಾಗಿದೆ.

-ಚಂದ್ರಶೇಖರ ಕಟ್ಟಿಮನಿ, ಬಾಗಲಕೋಟೆ

### ದೂರದ ಬೆಟ್ಟ!

ಯಲಗುರೇಶ ಸಂಕನಾಳರ ಲೇಖನ ಮನಮುಟ್ಟುವಂತಿತ್ತು. ಇದಕ್ಕಿಂತ ಹೆಚ್ಚಿನ ಕಿರಿಕಿರಿ ಕೊಡುವವರು ಸಹ ಇರುತ್ತಾರೆ. ಹಳೆಯ ಚೀಟಿ ತಾರದೆ ಬಿಳಿಮಾತ್ರೆ, ಕೆಂಪು ಔಷಧಿ ಎಂದು ನೆನಪು ಮಾಡುವವರು, ತಮ್ಮನ್ನೇ ಮೊದಲು ನೋಡಬೇಕೆಂದು ಬಯಸುವವರು, ಮನೆಗೆ ಬಂದು ನೋಡಲಿ ಎಂದು ಅಪ್ಪಣೆ ಮಾಡುವವರು, ಇತರ ವೈದ್ಯರನ್ನು ನಿಂದಿಸಿ ಆನಂದಿಸುವವರು– ಇತ್ಯಾದಿ. ಸರ್ಕಾರಿ ವೈದ್ಯರಾದರೆ ಹೆದರಿಸುವವರು, ವರ್ಗಾವಣೆ ಮಾಡಿಸುವವರು ಸಹ ಇರುತ್ತಾರೆ!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಬಾಲ್ಯವಿವಾಹದ ಮಾಹಿತಿ

ಎಂ.ವೇದಾವತಿಯವರ 'ಬಾಲಿಕಾ ವಧು' ಬರಹವು ಬಾಲ್ಯ ವಿವಾಹ ಮತ್ತು ಅದಕ್ಕಿರುವ ಕಾರಣಗಳನ್ನು ಬಿಚ್ಚಿಟ್ಟಿದೆ.

- ಎಸ್.ಪ್ರಶಾಂತ, ಮೈಸೂರು/ ಎಚ್.ಎಂ.ಕಾಳಮ್ಮ, ಬಸರಕೋಡು

### ಮನೋಜ್ಞ ಕಥೆ

ಜಿ. ಶರಣಪ್ಪರ 'ತಾಯಿ' ಕಥೆ ಮನಮುಟ್ಟುವಂತಿತ್ತು.

-ರಾಜಶೇಖರಗೌಡ, ಕೊಟ್ಟೂರು/ ಕೊಹಿಮ, ಬಸರಕೋಡು

### ಉತ್ತಮ ಕಥೆಗಳು

ಸುಜಯಾ ಹೆಬ್ರಿ ಅವರ ಅಲಕಾ ಕಥೆ ಮಾರ್ಮಿಕವಾಗಿದೆ, ಮತ್ತೊಂದು ಕಥೆ 'ತಾಯಿ'ಯಲ್ಲಿ ದಯೆ, ತ್ಯಾಗ, ಅಂತಃಕರಣ ಮನಮಿಡಿಯುವಂತಿದೆ.

-ಬಿ.ಸಿ.ಭುಜಂಗನವರ, ಧಾರವಾಡ/ ಎಂ.ಜಿ.ತಿಪ್ಪೇಸ್ವಾಮಿ, ಚಳ್ಳಕೆರೆ

### ಜಪಾನ್ ಮಾಹಿತಿ

ಕೆ.ಎಸ್. ಪವಿತ್ರರ 'ಕರುಣಾಮುಖಿಗಳ ನಾಡಿನಲ್ಲಿ' ಲೇಖನ ಜಪಾನ್ ಜನರ ಬಗ್ಗೆ ತಿಳಿದುಕೊಳ್ಳಲು ನೆರವಾಯಿತು.

-ಸಂಗೀತ ರವಿರಾಜ್, ಚೆಂಬು

### ಬಣ್ಣದ ಜೀವಜಲ- ವಂಡರ್‌ಫುಲ್

ವಂಡರ್ ಪುಟದ ವರ್ಣರಂಜಿತ ನದಿ ನಿಜಕ್ಕೂ ವಂಡರ್!

-ಶ್ರೀಪದ್ಮ ದೇಶನೂರು, ಧಾರವಾಡ

### ಹೀರೋ ಕಲ್ಯಾಣ್ ನೆನಪು

ಆ ದಿನಗಳಲ್ಲಿ ತ್ರಿವಳಿ ನಟರುಗಳಾದ ಉದಯ ಕುಮಾರ್, ಕಲ್ಯಾಣ್‌ಕುಮಾರ್ ಮತ್ತು ರಾಜ್ ಕುಮಾರರ ನಟನೆಯೇ ಅದ್ಭುತವಾಗಿ ಇತರರಿಗೆ ಒಂದು ಮಾದರಿಯಾಗಿತ್ತು. ಕಲ್ಯಾಣ್ ಕುಮಾರ್ ಕುರಿತು ಸಾರ್ಥವಳ್ಳಿ ನಾರಾಯಣಸ್ವಾಮಿ ಚಿಕ್ಕದಾಗಿ ಹಾಗೂ ಚೊಕ್ಕವಾಗಿ ಬರೆದಿದ್ದಾರೆ.

-ಪಿ.ಎಸ್. ಶ್ರೀವತ್ಸ, ನೆ.ಲ.ರಾಂ, ಬೆಂಗಳೂರು/ ಶ್ರೀಹರ್ಷ, ಮೈಸೂರು

### ಸುಖೀ ಮನೆಯ ವೈದ್ಯ ಡಾ.ಥೆಬ್ಬಿ

ತಮ್ಮ ಸಮಸ್ಯೆಗಳ ಬಗ್ಗೆ ಯಾರೊಡನೆ ಹೇಗೆ ಮಾತನಾಡಬೇಕೆಂದು ತಿಳಿಯದೆ ಕೊರಗುವ ಜನರಿಗೆ 'ಸುಧಾ' ವಾರಪತ್ರಿಕೆಯ ಸುಖೀಭವ ಕಾಲಂನಲ್ಲಿ ಕಳೆದ ಐದು ವರ್ಷಗಳಿಂದ ಡಾ.ವಿನೋದ ಛೆಬ್ಬಿಯವರು ನೀಡಿರುವ ಉತ್ತರಗಳು ಲೈಂಗಿಕತೆ ಕುರಿತ ಜನರ ಮನೋಭಾವ, ವರ್ತನೆ, ವ್ಯವಹಾರಗಳನ್ನು ನೇರ್ಪಡಿಸುವ ಕೆಲಸವನ್ನು ಬಹಳ ಪರಿಣಾಮಕಾರಿಯಾಗಿ ಮಾಡುತ್ತಿವೆ. ಸಂಭೋಗದ ಸುಖವನ್ನು ತನ್ಮೂಲಕ ವೈವಾಹಿಕ ಹೊಂದಾಣಿಕೆಯನ್ನು ಹಾಗೂ ಕೌಟುಂಬಿಕ ಸೌಖ್ಯ ಸಂವರ್ಧಿಸಲು ಡಾ. ಛೆಬ್ಬಿ ನೀಡುವ ಸಲಹೆ ಅಮೂಲ್ಯವಾಗಿವೆ.

-ಡಾ. ಆರ್. ವೆಂಕಟರೆಡ್ಡಿ, ಗುಲ್ಬರ್ಗ




ಪರಿಶುದ್ಧವಾದುದು ಮಾತ್ರ 4 ವಾರಗಳಲ್ಲಿ ಖಾತರಿಯಾದ ಫಲಿತಾಂಶ ನೀಡುವುದು




ರಾಸಾಯನಿಕಗಳಿಲ್ಲ
ಶ್ವೇತ ತೈಲವಿಲ್ಲ
ಕೃತಕ ಸುಗಂಧವಿಲ್ಲ




*The results may vary from person to person

ಖಾತರಿಯಾದ ಫಲಿತಾಂಶಕ್ಕಾಗಿ ಖಾತರಿಯಾದ ಪರಿಶುದ್ಧತೆ

100% ಪರಿಶುದ್ಧವಾದ ಮಹಾಭೃಂಗ್‌ರಾಜ್ ತೈಲ

ನೈಸರ್ಗಿಕವಾಗಿ ತಯಾರಾಗಿದೆ. ಬೈದ್ಯನಾಥ್‌ನಿಂದ ಶೀಶೆಗೆ ತುಂಬಿಸಲ್ಪಟ್ಟಿದೆ. ಆದಕಾರಣ, ಸಾಮಾನ್ಯ ತೈಲಗಳಿಗಿಂತ ಸ್ವಲ್ಪ ದುಬಾರಿ ಎನಿಸುತ್ತದೆ. ಆದರೆ ಪರಿಶುದ್ಧತೆ ಎಂದೂ ಅಗ್ಗವಾಗಿರದು. 100% ಪರಿಣಾಮಕಾರಿ. 4 ವಾರ ಇದನ್ನು ಉಪಯೋಗಿಸಿ ನಿಮ್ಮ ಕೇಶದಲ್ಲಿ ಉಂಟಾಗುವ ವ್ಯತ್ಯಾಸ ನೋಡಿ. ನೀವು ಮತ್ತೆ ಯಾವಾಗಲು ಸಾಮಾನ್ಯ ತೈಲ ಮುಟ್ಟುವುದೇ ಇಲ್ಲ.

ಬೈದ್ಯನಾಥ್

ಮಹಾಭೃಂಗ್‌ರಾಜ್ ತೈಲ